(ಕೋಟಿ ರೂ.ಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ	ಖರ್ಚಾದ ಹಣ	ಬಾಕಿ ಉಳಿದ ಹಣ
2007–08	951.44	945.99	5.45
2008–09	1710.42	1739.41 *	–

* ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚು ಖರ್ಚಾಗಿರುವುದಕ್ಕೆ ಕಾರಣ ಇಂಧನ ಇಲಾಖೆಯಡಿಯಲ್ಲಿ ವಿದ್ಯುಚ್ಛಕ್ತಿ ವಿತರಣಾ ಕಂಪನಿಗಳು ಸರ್ಕಾರ ಬಿಡುಗಡೆ ಮಾಡಿದ ಹಣವಲ್ಲದೆ ತಮ್ಮ ಸ್ವಂತ ಸಂಪನ್ಮೂಲದಿಂದ ಹಿಂದುಳಿದ ತಾಲ್ಲೂಕುಗಳಿಗೆ ವೆಚ್ಚ ಮಾಡಿರುತ್ತವೆ.

ಇ) ಸರ್ಕಾರದಿಂದ ಮಂಡಳಿ ಅಥವಾ ನಿಗಮಗಳಿಗೆ ಮೂಲಭೂತ ಸೌಕರ್ಯ/ಸಿವಿಲ್ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನವು ಲ್ಯಾಪ್ಸ್ ಆಗುವುದಿಲ್ಲ. ಈ ಅನುದಾನವನ್ನು ಮಂಡಳಿ ಅಥವಾ ನಿಗಮಗಳು ಮುಂದಿನ ವರ್ಷದಲ್ಲಿ ವಿನಿಯೋಗಿಸಬಹುದು. ಆದರೆ ಕೆಲವು ಇಲಾಖೆಗಳಿಗೆ ಬಿಡುಗಡೆ ಮಾಡಿದ ಹಣವು ಖರ್ಚಾಗದೇ ಇದ್ದಲ್ಲಿ ಇದು ಲ್ಯಾಪ್ಸ್ ಆಗುವುದು.

ಈ) ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೆಲವು ಕಾರ್ಯಕ್ರಮಗಳು ಕೇಂದ್ರ ಸರ್ಕಾರದ ಯೋಜನೆಗಳಾಗಿವೆ ಇದಲ್ಲದೆ ನಬಾರ್ಡ್ ನೆರವಿನ ಯೋಜನೆಗೂ ಸಹ ಇರುವುದರಿಂದ ಇಂತಹ ಯೋಜನೆಗಳಿಗೆ ಕೇಂದ್ರ ಸರ್ಕಾರ/ನಬಾರ್ಡ್ ಅನುಮೋದನೆ ದೊರೆತ ನಂತರ ಹಣ ಬಿಡುಗಡೆ ಮಾಡಬೇಕಾಗುವುದು. ಯೋಜನೆಗಳಿಗೆ ಅನುಮೋದನೆ ದೊರೆತ ನಂತರ ಹಣವನ್ನು ಬಿಡುಗಡೆ ಮಾಡಲಾಗಿದೆ.

522 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 2007–08, 2008–09, 2009–10ನೇ ಸಾಲಿಗೆ ಕೆರೆಗಳ ಪುನಃಶ್ಚೇತನಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ) ಯಾವ ಯಾವ ಕೆರೆಗಳನ್ನು ಈ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ; ಇದಕ್ಕೆ ಬಿಡುಗಡೆಗೊಳಿಸಿರುವ ಅನುದಾನದ ಮೊತ್ತವೇನು;

ಇ) ಈ ತಾಲ್ಲೂಕಿನ ಕೆರೆಗಳಲ್ಲಿ ಹೂಳುಗಳು ಈಗಲೂ ಸಹ ಅಧಿಕವಾಗಿದ್ದು, ಈ ಕಳಪೆ ಮಟ್ಟದ ಕಾಮಗಾರಿಗಳನ್ನು ಪೂರೈಸಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮವೇನು;

ಈ) ಕೆರೆಗಳ ಅಂತರಜಲ ಮಟ್ಟ ಏರಿಸಲು ಸರ್ಕರವು ರೂಪಿಸಿಕೊಂಡಿರುವ ವಿವಿಧ ಯೋಜನೆಗಳಾವುವು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಎ) 2007–08ನೇ ಸಾಲಿನಲ್ಲಿ ಒಟ್ಟು 08 ಕೆರೆಗಳ ಅಭಿವೃದ್ಧಿಗೆ ಒಟ್ಟು 80.00 ಲಕ್ಷಗಳ ಅನುದಾನ ಒದಗಿಸಿದ್ದು ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಪೈಕಿ 04 ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿಕೆ 04 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸ ಲಾಗುವುದು.

ಬಿ) 2008–09ನೇ ಸಾಲಿನಲ್ಲಿ 11 ಕಾಮಗಾರಿಗಳನ್ನು ಒಟ್ಟು ಅಂದಾಜು ಮೊತ್ತ ರೂ.203.00 ಲಕ್ಷಗಳಲ್ಲಿ ಕೈಗೊಂಡಿದ್ದು, ಇವುಗಳ ಪೈಕಿ 06 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಉಳಿದ 5 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿದ್ದು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಿ) 2009–10ನೇ ಸಾಲಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಒಟ್ಟು 3 ಕೆರೆ ಕಾಮಗಾರಿಗಳನ್ನು ಒಟ್ಟಾರೆ ಅಂದಾಜು ಮೊತ್ತ 25.00 ಲಕ್ಷಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಡಿ) ಅದೇ ರೀತಿ ವಿಶ್ವಬ್ಯಾಂಕ್ ನೆರವಿನ ಸಮುದಾಯಾಧಾರಿತ ಕೆರೆ ನಿರ್ವಹಣೆ ಯೋಜನೆಯಡಿ ಜಲಸಂವರ್ಧನೆ ಯೋಜನಾ ಸಂಘದ ವತಿಯಿಂದ 2009–10 ರಿಂದ 2011–12ರ ಅವಧಿಯಲ್ಲಿ 90 ಕೆರೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಆ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ 2009–10ನೇ ಸಾಲಿಗೆ (1) ಗೌರಿಬಿದನೂರು ತಾಲ್ಲೂಕು ದೊಡ್ಡಕುರುಗೋಡು ದೊಡ್ಡಕೆರೆಯ ಪೋಷಕ ಕಾಲುವೆ (2) ರಾಮಸ್ವಾಮಿ ಕೆರೆಯ ಪೋಷಕ ಕಾಲುವೆ ಹಾಗೂ (3) ಸಾಗಾನಹಳ್ಳಿ ಲಿಂಗಪ್ಪನಕುಂಟೆ ಕೆರೆಯ ಪೋಷಕ ಕಾಲುವೆ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ. ಜಲಸಂವರ್ಧನೆ ಯೋಜನಾ

ಸಂಘದ ವತಿಯಿಂದ 2009–10 ರಿಂದ 2011–12ರ ಅವಧಿಯಲ್ಲಿ ಅಭಿವೃದ್ಧಿಗೊಳಿಸಲು ಉದ್ದೇಶಿಸಿರುವ ಕೆರೆಗಳನ್ನು ಗುರುತಿಸಲಾಗುತ್ತಿದೆ.

ಇ) ಗೌರಿಬಿದನೂರು ತಾಲ್ಲೂಕಿನಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಗುತ್ತಿಗೆದಾರರಿಂದ ಕಳಪೆ ಕಾಮಗಾರಿಯಾಗಿರುವ ಬಗ್ಗೆ ದೂರು ಬಂದಿರುವುದಿಲ್ಲ. ಆದ್ದರಿಂದ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಅಂತರ್ಜಲ ಅಭಿವೃದ್ಧಿಗೆ 2008–09ನೇ ಸಾಲಿನಲ್ಲಿ 4 ಪಿಕಪ್ ಗಳ ನಿರ್ಮಾಣವನ್ನು ರೂ:48–00 ಲಕ್ಷಗಳ ಅಂದಾಜು ಮೊತ್ತ ಹಾಗೂ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ಕುಡುಮಲಕುಂಟೆ ಗ್ರಾಮದ ಹತ್ತಿರ ರೂ:94.00 ಲಕ್ಷಗಳ ಭೂಗತ ತಡೆಗೋಡೆ ನಿರ್ಮಾಣಕ್ಕೆ ಕಾರ್ಯಕ್ರಮ ರೂಪಿಸಿದ್ದು ಈ ಎಲ್ಲಾ ಕಾಮಗಾರಿಗಳ ಅಂದಾಜು ಪಟ್ಟಿಗಳು ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. ಅದಲ್ಲದೆ ಅಂತರ್ಜಲದ ಅತಿಯಾದ ಬಳಕೆಯನ್ನು ತಡೆಗಟ್ಟಲು ಕಾನೂನು ರೂಪಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ.

523 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸರಿಯಾದ ಪ್ರಮಾಣದಲ್ಲಿ ಮುಂಗಾರು ಮಳೆಯಾಗದೇ ರೈತರು ಕಂಗಾಲಾಗಿರುವುದು ನಿಜವಲ್ಲವೇ;

ಆ) ಈ ಬರಪೀಡಿತ ತಾಲ್ಲೂಕಿಗೆ ಸರ್ಕಾರದಿಂದ ರೈತರಿಗೆ ಸಿಗಬಹುದಾದ ಸೌಲಭ್ಯಗಳೇನು; (ವಿವರವಾರು ಒದಗಿಸುವುದು)

ಇ) ಈ ತಾಲ್ಲೂಕನ್ನು ಬರಪೀಡಿತ ತಾಲ್ಲೂಕೆಂದು ಘೋಷಣೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಜೂನ್ 1 ರಿಂದ ಜುಲೈ 14ರವರೆಗೆ ಗೌರಿಬಿದನೂರು ತಾಲ್ಲೂಕಿನಲ್ಲಿ ಸಾಮಾನ್ಯವಾಗಿ 90 M.M. ಮಳೆಯಾಗಬೇಕಾಗಿದ್ದು ಆದರೆ ವಾಸ್ತವವಾಗಿ 161.6.MM ಮಳೆಯಾಗಿದ್ದು ಮಾಮೂಲಿಗಿಂತ ಹೆಚ್ಚಿಗೆ ಮಳೆಯಾಗಿದೆ.